ಆಶ್ರಯ ಯೋಜನೆಯಲ್ಲಿ ಗುರುತಿಸಿರುವ ಫಲಾನುಭವಿಗಳು.

104 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1993ನೇ ಮಾರ್ಚ್ ಅಖೈರುವರೆಗೆ ಆಶ್ರಯ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಯೋಜನೆಯಲ್ಲಿ ನಿವೇಶನವನ್ನು ಹಂಚಲು ಸರ್ಕಾರಿ ಜಮೀನು ಅಲ್ಲದೆ ಖಾಸಗಿ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ (ತಾಲ್ಲೂಕುವಾರು ವಿವರ ಬೇಕು);

ಇ) ಸ್ವಾಧೀನ ಪಡಿಸಿಕೊಂಡ ಜಮೀನಿನ ಮಾಲಿಕರಿಗೆ ಪರಿಹಾರ ನೀಡಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಫಲಾನುಭವಿಗಳ ಒಟ್ಟು ಸಂಖ್ಯೆ 7820.

ತಾಲ್ಲೂಕುವಾರು ವಿವರ ಈ ಕೆಳಗಿನಂತೆ ಇದೆ.

ತಾಲ್ಲೂಕುಗಳ ಹೆಸರು		ಗುರುತಿಸಲಾದ ಫಲಾನುಭವಿಗಳ ಸಂಖ್ಯೆ			
		ಪ.ಜಾತಿ	ಪ.ಪಂಗಡ	ಇತರರು	ಒಟ್ಟು
1.	ಕುಂದಾಪುರ	8	7	205	220
2.	ಉಡುಪಿ	224	64	1804	2092
3.	ಕಾರ್ಕಳ	28	9	36	73
4.	ಪುತ್ತೂರು	132	42	218	392
5.	ಸುಳ್ಯಾ	135	107	286	528
6.	ಬೆಳ್ತಂಗಡಿ	34	46	868	948
7.	ಬಂಟ್ವಾಳ	169	127	1488	1784
8.	ಮಂಗಳೂರು	214	32	1537	1783
	ಒಟ್ಟು	944	434	6442	7820

ಆ) ಗ್ರಾಮೀಣ ಪ್ರದೇಶಗಳಲ್ಲಿ ಖಾಸಗೀ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ನಗರ ಪ್ರದೇಶದಲ್ಲಿ ಕುಂದಾಪುರ ಪುರಸಭೆವ್ಯಾಪ್ತಿಯ ನಿವೇಶನದ ಜೊತೆಗೆ ವಡೇರಹೋಬಳಿ ಗ್ರಾಮದಲ್ಲಿ 3 ಎಕರೆ 29 ಗುಂಟೆ ಖಾಸಗೀ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು, ಕಬ್ಜಾವನ್ನು ಕೂಡ ಪುರಸಭೆ ಕುಂದಾಪುರಕ್ಕೆ ನಿವೇಶನ ಹಂಚಲು ಒಪ್ಪಿರುತ್ತದೆ. ಅಲ್ಲದೆ, ಈ ಬಾಬ್ತು ಕುಂದಾಪುರ ಉಪ ವಿಭಾಗಾಧಿಕಾರಿಗಳಲ್ಲಿ 2,76,346 ರೂ.ಗಳನ್ನು ಠೇವಣಿ ಮಾಡಲಾಗಿದೆ. ಆದರೆ ಪುರಸಭೆ ಕುಂದಾಪುರದವರಲ್ಲಿ ಹೆಚ್ಚುವರಿ 53,000 ರೂ. ವಂತಿಗೆಯನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಿರುವುದಿಲ್ಲ.

ಇ) ಇಲ್ಲ.

ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಗೆ ಹಣ ಬಿಡುಗಡೆ.

95 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಗೆ 1992-93ನೇ ಸಾಲಿನಲ್ಲಿ ಯೋಜನೆಗಳಿಗಾಗಿ ಮಂಜೂರಾದ ಹಣ ಎಷ್ಟು?

(ಆ) ಹಾಗೆ ಮಂಜೂರಾದ ಹಣದಲ್ಲಿ ರಾಜ್ಯ ಸರ್ಕಾರದವರು ಉಪಯೋಗಿಸಿಕೊಂಡ ಹಣ ಎಷ್ಟು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

(ಅ) ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಗೆ 1992-93ನೇ ಸಾಲಿನಲ್ಲಿ ಈ ಕೆಳಕಂಡಂತೆ ಹಣ ಬಂದಿರುತ್ತದೆ.

		ಲಕ್ಷ ರೂ.ಗಳು
ಅ)	ಇಲಾಖಾ ಕಾರ್ಯಕ್ರಮಗಳು	718.608
ಆ)	ವಿಶೇಷ ಘಟಕ ಯೋಜನೆ	1465.33
ಇ)	ಗಿರಿಜನ ಉಪ ಯೋಜನೆ	327.42
	ಒಟ್ಟು	**2511.358**

(ಆ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಒಟ್ಟು 2511.358 ಲಕ್ಷ ರೂ.ಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

ಪವರ್‌ಲೂ ಅಭಿವೃದ್ಧಿ ನಿಗಮದ ಸ್ಥಾಪನೆ.

657 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರತಕ್ಕ ಪವರ್‌ಲೂಂಗಳ ಒಟ್ಟು ಸಂಖ್ಯೆ ಎಷ್ಟು?

ಆ) ಪವರ್‌ಲೂಂ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ, ಈ ನಿಗಮದ ಬಂಡವಾಳವೆಷ್ಟು?

ಈ) ಈ ನಿಗಮವನ್ನು ಎಲ್ಲಿ ಯಾವಾಗ ಸ್ಥಾಪಿಸಲಾಗುವುದು.

ಉ) ಇದರಿಂದ ಆಗತಕ್ಕ ಉಪಯೋಗಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) 51,785

ಆ) - ಹೌದು -

ಇ) ಒಟ್ಟು ಮೂಲ ಬಂಡವಾಳ ರೂ. 100 ಲಕ್ಷವನ್ನು ಒದಗಿಸಲು ಉದ್ದೇಶಿಸಲಾಗಿದೆ.

ಈ) ಈ ನಿಗಮವನ್ನು ಆದಷ್ಟು ಬೇಗನೆ ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು.

ಉ) ರಾಜ್ಯದಲ್ಲಿ ವಿದ್ಯುತ್‌ಚಾಲಿತ ಮಗ್ಗಗಳ ನಿಗಮ ಸ್ಥಾಪನೆಯಿಂದ ಈ ಕೆಳಗಿನಂತೆ ಉಪಯೋಗವಾಗುವುದು.

1) ತಂತ್ರಜ್ಞಾನ (ತಾಂತ್ರಿಕ ಜ್ಞಾನ) ಒದಗಿಸುವುದು.

2) ವಿದ್ಯುತ್‌ಚಾಲಿತ ಮಗ್ಗಗಳ ಎಸ್ಟೇಟ್ ಸ್ಥಾಪನೆಗೆ ನೆರವಾಗುವುದು.

3) ಈ ಕ್ಷೇತ್ರ ಎದುರಿಸುವ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗುವುದು

4) ಸೂಕ್ತ ಮಾರುಕಟ್ಟೆ ವ್ಯವಸ್ಥೆ ಒದಗಿಸುವುದು ಹಾಗೂ ವಿದೇಶಿ ಮಾರುಕಟ್ಟೆ ಅವಕಾಶಗಳನ್ನು ತಿಳಿಸುವುದು.

5) ಸುಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದು.